Regd No M [illegible] | 3rd Year | Sri 'Satyavadi' Mysore | 17—2—1959

ಪ್ರಮುಖ ವರ್ತಮಾನಗಳಿಗೆ
ರಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ನಿಂಸ್ಕೇದಾರ್ ಎ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಪಾಕೀಸ್ತಾನ ಸೇನಿಕರಿಂದ ಭಾರತ ಪ್ರದೇಶ ಮೇಲೆ ತೀವ್ರ ಗುಂಡಿನೇಟು

ದಿವ್ಯವಾಣಿ

ಸ್ತ್ರೀಯರೂ ಪುರುಷರು ಅನ್ಯಾಯವಾಗಿ ಬಂಧಿಸಲ್ಪಟ್ಟಾಗ, ನ್ಯಾಯವಾದ ಜನರಿಗೂ ಕಾರಾಗೃಹದಲ್ಲಿ ಸ್ಥಾನವಾಗಿದೆ — ಹೆನ್ರಿ ಡೇವಿಡ್ ಥೋರಿಯರ್

ಆಕಾಶವಾಣಿ ಕೇಂದ್ರಗಳು

ಭಾರತದಲ್ಲಿ ಒಟ್ಟು 28 ಆಕಾಶವಾಣಿ ಕೇಂದ್ರಗಳೂ 55 ಟ್ರಾನ್ಸ್‌ಮಿಟರು ಯಂತ್ರಗಳೂ ಇವೆ.

ರಷ್ಯದಲ್ಲಿ ವೈದ್ಯರು

ರಷ್ಯಾದಲ್ಲಿ 1965 ನೇಳಿಗೆ ಡಾಕ್ಟರರ ಸಂಖ್ಯೆಯು ಸುಮಾರು 5 ಲಕ್ಷ ಕ್ಕೇರುವುದು.

ಕೇಂದ್ರಕ್ಕೆ ನೆರವು

ಬೊಂಬಾಯಿ — ಭಾರತವು ಕನ್ನ 2 ನೆಯ ಪಂಚವಾರ್ಷಿಕ ಯೋಜನೆಗೆ ಅಮೆರಿಕಾದಿಂದ ಸುಮಾರು 100 ಕೋಟಿ ರೂಗಳ ಹೆಚ್ಚಿದ ಸಹಾಯ ಪಡೆಯುವುದು.

ಕ್ಯಾಲೆಂಡರು ಸ್ವೀಕಾರ

ಪ್ರಸಿದ್ಧ ವ್ಯಾಪಾರಸ್ಥ ಗೋದ್ರೇಜ್ ಕಂಪೆನಿಯವರು ಸುಂದರವಾದ ಕ್ಯಾಲೆಂಡರನ್ನು ಪ್ರೀತಿಪೂರ್ವಕವಾಗಿ ಸ್ವೀಕರಿಸಿದೆ.



ಬೆಳ್ತಂಗಡಿ 13 — ಅಂಬೂರಿನಲ್ಲಿ 8 ನೆಯ ರಾಜಕೀಯ ಪರಿಷತ್ತಿನಲ್ಲಿ ಮದರಾಸಿನ ಮುಖ್ಯ ಮಂತ್ರಿ ಶ್ರೀ ಕೆ. ಕಾಮರಾಜರು ಪಾಲ್ಗೊಳ್ಳುತ್ತಾರೆಂಬ ದ್ರವಿಡ ಮುನ್ನೇತ್ರ ಕಳಗಂಗೆ ಕಟ್ಟವೇ ಪಕ್ಷದ ಅ[illegible] ಪಾಲಿಸಿನಾಥ್ ಶಿವಗಂಗ ಅಧಾರ ನಿಲ್ಲಿ ಅಂಕಿಲ್ಲ.

ಸಮಾಪ್ತ ಭಾಷಣ

ಮೈಸೂರು ಸರ್ಕಾರದ ಪ್ರಧಾನ ವಾರ್ತಾಧಿಕಾರಿಯವರಾದ ಶ್ರೀ ಡಿ ಆರ್ ರಾಮಯ್ಯನವರು ಕೋಲಾರ ಒಕ್ಕಲಿಗರ ವಿದ್ಯಾರ್ಥಿನಿಲಯ ಸಂಘದ ಸಮಾಪ್ತ ಭಾಷಣವನ್ನು ನೆರವೇರಿಸಿದರು

ಫೋರ್ ಬಳಕೆ

ನ್ಯೂಯಾರ್ಕ್ 16 — ಅಮೇರಿಕಾ ಅಧ್ಯಂತ ಯಾವ ನಂಬರಿಗೆ ಬೇಕಾದರೂ ಇಲ್ಲಿನ 5 ಲಕ್ಷ ಟೆಲಿಫೋನ್ ಚಂದಾದಾರರು 45 ನಿಮಿಷ ಟೆಲಿಫೋನಿನಲ್ಲಿ ಮಾತನಾಡಬಹುದು

ವರ್ಣಭೇದ ಪರಿಹಾರಕ್ಕೆ

ಗಯಾ 15 — ಅಮೇರಿಕಾದ ನೀಗ್ರೊ ನಾಯಕ ಡಾ|| ಮಾರ್ಟಿನ್‌ಲೂಥರ್ ಇಲ್ಲಿ ಹೇಳಿಕೆಯಿತ್ತು, ಅಮೇರಿಕ ಶಾಲೆಯಲ್ಲಿ ವರ್ಣಭೇದವನ್ನು ಗಾಂಧೀಜಿಯವರ ಶತ್ವದಿಂದ ಅಹಿಂಸಾತ್ಮಕವಾಗಿ ಪರಿಹರಿಸಬೇಕೆಂದರು

ಗೋಪಾಲನ್ನರ ಆರೋಪ

ಅಲಹಾಬಾದು 15 — ಕ್ಷೇಂಳದ ಕಮ್ಯೂನಿಸ್ಟ್ ಸರ್ಕಾರವನ್ನು ಉರುಳಿಸಲು ಕೇಂಳ ಕಾಂಗ್ರೆಸು ಪಕ್ಷ ಮತ್ತು ಕೇಂದ್ರ ಸರ್ಕಾರ ಆಹಾರ ಬಿಕ್ಕಟ್ಟುಂಟು ಮಾಡುತ್ತಿದೆಯೆಂದಾಗಿ ಇಲ್ಲಿನ ಬಹಿರಂಗ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ನಾಯಕ ಶ್ರೀ ಎ ಕೆ ಗೋಪಾಲ್ ತಿಳಿಸಿದ್ದಾರೆ

ಓರ್ವನ ಮರಣ

ಮದ್ರಾಸು 16 — ಕಳೆದ ರಾತ್ರಿ 11 ಗಂಟೆಯಲ್ಲಿ ಚಿತ್ತೂರಿಗೆ ಹೋಗುತ್ತಿದ್ದ ರೈಲಿಗೆ-ಲಾರಿಗೆ ಡಿಕ್ಕಿ ಆಗಿ ಒಬ್ಬ ಸತ್ತು 4 ಜನರು ಗಾಯಗೊಂಡರು

ಕರೀಂಗಂಜ್ 16 — ಅಧಿಕೃತ ವಂದಿಗಳ ಪ್ರಕಾರ ಕರೀಂಗಂಜಿನ ಗಡಿ ನಗರಕ್ಕೆ ಸುಮಾರು 7 ಮೈಲಿಗಳ ದೂರ ವಿರುವ ಅಟುವಿನ ಅನೇಕ ಕಟ್ಟಡಗಳು ಪಾಕಿಸ್ತಾನ ಸೇನೆಗಳ ಮೆಷಿನ್ ಗನ್‌ಗಳ ಹೊಡೆತದಿಂದ ನಾಶವಾಗಿವೆ ಹೈಸ್ಕೂಲು, ಅಂಚೆ ಕಚೇರಿ, ಆಸ್ಪತ್ರೆ, ವಾರ್ತಾ ವಿಭಾಗ ಶಾಲೆ ಮತ್ತಿತರ ಖಾಸಗಿ ಕಟ್ಟಡಗಳು ನಾಶವಾಗಿವೆ

ಕಾಗದದ ಕಾರ್ಖಾನೆ

ಬೆಂಗಳೂರು 16 — ಭಾರತ-ಅಮೆರಿಕ ಪ್ರಯತ್ನದಿಂದ ಮೈಸೂರು ನಗರದ ಹತ್ತಿರವಿರುವ ಬಳಗೊಳದಲ್ಲಿ ಕಾಗದದ ಕಾರ್ಖಾನೆ ಆರಂಭವಾಗಿ 61 ನೆಯ ಇಸವಿಯಿಂದ ಉತ್ಪಾದನೆಗೆ ಪ್ರಾರಂಭವಾಗುವುದು

ಮೈಸೂರಿಗೆ ಪ್ರತ್ಯೇಕ ಸರ್ಕಲ್

ನವ ದೆಹಲಿ 16 — ಸಾರಿಗೆ ಮತ್ತು ಸಂಪರ್ಕ ಶಾಖೆ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ಲೋಕಸಭೆಯಲ್ಲಿ ಹೇಳಿಕೆಯಿತ್ತು, ಮೈಸೂರಿಗೆ ಪ್ರತ್ಯೇಕ ಅಂಚೆ ಸರ್ಕಲ್ ಕೊಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ ಎಂದರು

ಅಂಬಾಲಾ 15 — ಸಿಕ್ಖರಿಗೆ ಪ್ರತ್ಯೇಕ ಪ್ರಾಂತ ಬೇಕೆಂದು ಮಾ|| ತಾರಾ ಸಿಂಗರು ಈ ದಿನ ಸಿಕ್ ಧರ್ಮ ರಕ್ಷಣಾ ಸಮ್ಮೇಳನದಲ್ಲಿ ತಿಳಿಸಿದರು

ವಿದರಾಸು 16 — ಹೈದರಾಬಾದು ತಿರುವನಂತಪುರಂ ಮತ್ತು ಬೆಂಗಳೂರಿನಲ್ಲಿ ದಂತ ಕಾಲೇಜು ಸಧ್ಯದಲ್ಲಿಯೇ ಸ್ಥಾಪಿಸವಾಗುವದು

ನವ ದೆಹಲಿ 16 — ಈ ವಾರಾಂತ್ಯ ದೊಳಗೆ ಕಾಂಗ್ರೆಸು ಕಾರ್ಯಕಾರಿ ಸಮಿತಿ ರಚನೆ ಆಗುವದಾಗಿ ಶ್ರೀಮತಿ ಇಂದಿರಾ ಗಾಂಧಿ ತಿಳಿಸಿದ್ದಾರೆ

ವಿವಿಧ ವಿಷಯಗಳು

ಕೋಲಾರ 15 — ತಿರುವಣ್ಣಾಮಲೆಯ ಅರುಣಗಿರಿ ಬೆಂಕಿ ಕಡ್ಡಿ ಕಾರ್ಖಾನೆಯ ಶ್ರೀ ಬಿ ಆರ್. ಪಾಂಡುರಂಗರಿಗೆ ಕಳಿಸಿದ ಇಕ್ಷೂರ್ಡ್ ಕವರು ಪತ್ತೆ ಇಲ್ಲವೆಂದು ಸ್ಥಳೀಯ ವರ್ತಕ ಶ್ರೀ ಎಂ. ಕೃಷ್ಣಪ್ಪನವರು ಪೋಲೀಸರಿಗೆ ದೂರು ಕೊಟ್ಟಿರುವರು

ಲಾಗೋಸ್ 16 — ಒಡವರು ಪತ್ನಿಯರನ್ನು ಹೊಂದುವ ಸಲುವಾಗಿ ಕನ್ಯೆಗೆ ಕೊಡಬೇಕಾದ ಹಣ 10 ಪೌಂಡುಗಳಿಗೆ ನಿಗದಿಗೊಳಿಸಿದೆಂದು ಮತ್ತು 20 ದಿರುಸುಗಳಿಗೆ ನಿಗದಿಗೊಳಿಸಿದೆಂದು ಅಜ್ಞಾಪಿಸಿದೆ

ಬೆಂಗಳೂರು 16 — ಮೈಸೂರು-ಬೊಂಬಾಯಿ ಗಡಿ ಬಗ್ಗೆ ಮೈಸೂರಿನ ನಿಲುವಿನಲ್ಲಿ ಬದಲಾವಣೆ ಇಲ್ಲವೆಂದು ಈ ದಿನ ಮುಖ್ಯ ಮಂತ್ರಿ ಶ್ರೀ ಬಿ. ಡಿ ಜತ್ತಿಯವರು ನುಡಿದರು.

ಡಲ್ಲಾರು ಕೆಲವು ಬಿಟ್ಟರೂ ಅಮೇರಿಕ ವಿದೇಶ ನೀತಿಯಲ್ಲಿ ಬದಲಾವಣೆಯಿಲ್ಲವೆಂದು ಉಪಾಧ್ಯಕ್ಷ ನಿಕ್ಸನ್ ತಿಳಿಸಿರುವರು

ಮೈಸೂರು ಸ್ಪಭಾ

ಬೆಂಗಳೂರಿನಿಂದ ಶ್ರೀ ಕೆ ಎಂ ಆರ್ ಎ ಶಾಸ್ತ್ರಿ, ಬಿ ಎ., ಯವರ ಸಂಪಾದಕತ್ವದಲ್ಲಿ ಪ್ರಕಟವಾಗುವ ಮೈಸೂರು ಸ್ಪಭಾ ಗಣರಾಜ್ಯ ಸಂಚಿಕೆಯನ್ನು ಸಾದರದಿಂದ ಸ್ವೀಕರಿಸಿದ್ದೇವೆ ಸ್ವಾರಸ್ಯ ಲೇಖನಗಳು, ಅಂದವಾದ ಮುದ್ರಣದಿಂದ ಈ ಸಂಚಿಕೆ ಕೂಡಿದೆ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಿಂಪಶ್ಯಕೃಷ್ಣ ಜೋಯಿಸರಿಂದ

18 ದಕವಿ ಮೃಗಶಿರ

ಗಾಂಧಿ ಮತ್ತು ಲಿಂಕನ್

ಮದರಾಸು — ಲಿಂಕನ್ ಮತ್ತು ಗಾಂಧಿ ಇಬ್ಬರೂ ಯುಗಪುರುಷರು; ಜಾತಿಯಾವುದಾದರೇನು, ಬಣ್ಣ ಯಾವುದಾದರೇನು ? ಜನರೆಲ್ಲರೂ ಸೋದರರು ಎಂದ ಸರಳ ಸೂತ್ರವನ್ನು ಸಾರ್ಥಕಗೊಳಿಸಿದವರು — ಒಡೆಯ, ಗುಲಾಮ ಎಂಬ ವ್ಯವಸ್ಥೆಯ ಹುಟ್ಟಡಗಿ ಹೋಗುವವರೆಗೂ, ಸ್ವಾತಂತ್ರ್ಯಕ್ಕಾಗಿಯೂ ಅವರು ಕೈಗೊಂಡು ನಡೆಸಿದ ಕಾರ್ಯ ಅರ್ಧಾಂತಕವಾಗಿಯೇ ಉಳಿಯುತ್ತದೆ; ಮುಂದಿನ ಮಹತ್ತರ ಪ್ರಯತ್ನದ ಹೊಣೆಗಾರಿಕೆಯನ್ನು ಅವರು ನಮ್ಮ ಪಾಲಿಗೆ ಬಿಟ್ಟಿದ್ದಾರೆ. ಎಂದು ಮದರಾಸು ಕ್ರಿಶ್ಚಿಯನ್ ಕಾಲೇಜಿನ ಇತಿಹಾಸ ಸಂಘದ ಮುಕ್ತಾಯ ಭಾಷಣ ಮಾಡುತ್ತಾ ಡ್ಯಾವಿಡ್ಸನ್ ಇನ್ಸ್ಟಿಟ್ಯೂಟಿನ ಅಧ್ಯಕ್ಷರಾದ ಡಾ || ಅಲನ್ಬೈ ಜಿವೊರ್ಕರ್ ಮೊರಾಸ್ ಇಂದು ನುಡಿದರು — ಗಾಂಧಿ, — ಲಿಂಕನ್ ಇಬ್ಬರೂ ಸಾಮಾನ್ಯ ಜನರ ರಕ್ಷಣೆಗೆ ನಿಂತ ಅಸಮಾನ್ಯ ವ್ಯಕ್ತಿಗಳು; ಅವರಾಡಿದ ಸತ್ಯದ ನುಡಿಗಳು, ನಡೆಸಿದ ಸರಳ ಜೀವನಗಳು ಮತ್ತು ಅವರ ತತ್ವ ನಿಷ್ಠೆ, ರಾಷ್ಟ್ರೀಯರ ಪ್ರೀತಿಯನ್ನು ಗೆದ್ದುಕೊಟ್ಟವು : ಇಬ್ಬರೂ ಒಳ್ಳೆಯ ನ್ಯಾಯವಾದಿಗಳೇ : ಭೌತಿಕ ಯಶಸ್ಸನ್ನು ಇಬ್ಬರೂ ತಿರಸ್ಕರಿಸಿದರು; ನ್ಯಾಯವಾದಿಗಳಾಗಿದ್ದಾಗ ಶುಲ್ಕ ತೆರಲಾರದ ಕಕ್ಷಿಗಳಿಗೂ ಸಹಾಯ ಮಾಡಿದರು, ಎಂದೂ ಹೇಳಿದರು.

ವುಡ್‌ಲ್ಯಾಂಡ್ ಶಿಲ್ಪ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನವಾಗುತ್ತಿರುವ ಯಶಸ್ವಿ 3 ನೇ ವಾರ

ದಿಲ್ಲೀ – ಕ – ಥಗ್ (ಹಿಂದಿ)

ಶಾರದಾಗಣ- ನೂರ್ಜ, ಕಿಶೋರ್, ಸೈಕಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಅಪೆರಾ— 11–2–59 ರಿಂದ

ಚಂಚುಲಕೆ ಟಾಕ್ರಿ

ಅಂಜಲಿದೇವಿ, ನಾಗೇಶ್ವರರಾವ್, ರಂಗರಾವ್, ತಂಗವೇಲು ಇ ವಿ ಸರೋಜ

ಪಾತ್ರವಹಿಸಿರುವ ಚಿಕ್ಕಾಕರ್ಷಕ ತಮಿಳು ಚಿತ್ರ [ಪ್ರತಿದಿನ 3 ಆಟಗಳು

B. S. K. Rao
High-class Gents Dress-Maker
Upadhyaya's Building
Sayyaji Rao Road
MYSORE

ಪಕ್ಕದ ಚಿತ್ರ

ಮಾಸ್ಕೋದಲ್ಲಿ ಅಖಂಡ ಫೆರೋ ಕಾಂಕ್ರೀಟು (ಅರಮನೆ) ನಲ್ಲಿ ಒಂದು ಹೊಸ ಟೀವೀ ಗೋಪುರ ನಿರ್ಮಿಸುವ ಕಾರ್ಯ ಪ್ರಾರಂಭವಾಗಿದೆ — ಗೋಪುರ ಜಗತ್ತಿನಲ್ಲೇ ಅತ್ಯುನ್ನತ ಗೋಪುರಗಳಲ್ಲಿ ಒಂದಾಗುವುದು, 508 ಮೀಟರು ಎತ್ತರವಿರುವುದು : ಆ ಎತ್ತರದಲ್ಲಿ ಎಂಡು ಪ್ರೇಕ್ಷಣಾ ವೇದಿಗಗಳನ್ನು ನಿರ್ಮಿಸಲಾಗುವುದು ; ಇಲ್ಲಿ 240 ಜನ ಕೂಡಲು ಸ್ಥಳವಿರುವ ಒಂದು ಉಪಹಾರ ಗೃಹವೂ ಇರುವುದು : ನಾಲ್ಕು ಉನ್ನತ ವೇಗದ ಲಿಫ್ಟುಗಳು ಪ್ರೇಕ್ಷಕರನ್ನು 400 ಮೀಟರು ಎತ್ತಕ್ಕೆ ಕೊಂಡೊಯ್ಯುತ್ತದೆ.

Edited, Printed & Published by Dharma Prachara Nurala M S Krishna Rao, at the Satyavadi Press Chamarajapuram, Mysore